# ಆಹಾ ಸುದ್ದಿ!

★ ಸಸಿತೋಟ



ಬೆಲ್ಜಿಯಂನಲ್ಲಿ ಮೂತ್ರವನ್ನು ಕುಡಿಯುವ ನೀರನ್ನಾಗಿ ಕ್ಷಣಾರ್ಧದಲ್ಲಿ ಪರಿವರ್ತಿಸುವ ಯಂತ್ರವನ್ನು ಹಾದಿ– ಬೀದಿಯಲ್ಲೆಲ್ಲ ಇಟ್ಟಿದ್ದಾರಂತೆ. ಅದು ಸೌರಶಕ್ತಿ ಬಳಕೆ ಮಾಡಿಕೊಂಡು ದಾಹ ಇಂಗಿಸುವ ಕೆಲಸ ಮಾಡುತ್ತಿದೆಯಂತೆ. ಸಮುದ್ರದ ನೀರು ಆವಿಯಾಗಿ, ಮೋಡವಾಗಿ ಮಳೆ ಸುರಿದು ಮತ್ತೆ ಸಮುದ್ರ ಸೇರುತ್ತದೆ. ನಾವು ಕುಡಿದ ನೀರು ಮೂತ್ರವಾಗಿ, ಮೂತ್ರ ಮತ್ತೆ ಕುಡಿಯುವ ನೀರು ಯಾಕಾಗಬಾರದು? ಕುಡಿಯುವ ನೀರಿನ ಅಭಾವವೇನೋ ತೀರಿತು, ಮತ್ತೆ ತಿನ್ನುವ ಆಹಾರ? ಸಾರ್ವಜನಿಕವಾಗಿ ತಿನ್ನಬುದಾದರೂ ತಯಾರಿಸಲಂತೂ ಸಾಧ್ಯವಿಲ್ಲವಲ್ಲ!

ಜಿನೆವಾದಲ್ಲಿ ಗಂಡನ ಹೊರ ಸಂಬಂಧಗಳಿಂದ ಬೇಸತ್ತ ಮಹಿಳೆಯೊಬ್ಬಳು ವಿಮಾನ ನಿಲ್ದಾಣದಲ್ಲಿ ಬಾಂಬ್ ಇದೆ ಎಂದು ಹುಸಿ ಕರೆ ಮಾಡಿ ಈಗ ಕಂಬಿ ಎಣಿಸುತ್ತ ಕೂತಿದ್ದಾಳಂತೆ. ಗಂಡ ತನ್ನ ಪ್ರೇಯಸಿಯೊಂದಿಗೆ ರಜಾದ ಮಜಾ ಅನುಭವಿಸಲು ಹೊರಟಾಗ ಅದನ್ನು ತಡೆಯುವ ಕೊನೆಯ ಯತ್ನವಾಗಿ ಈ ಕರೆ ಮಾಡಿ ವಿಮಾನ ನಿಲ್ದಾಣದಲ್ಲಿ ಅಲ್ಲೋಲಕಲ್ಲೋಲ ಎಬ್ಬಿಸಿದಳಂತೆ. ಮಹಿಳೆ ಸಿಟ್ಟಿಗೆದ್ದರೆ ಮನೆ ನರಕಕ್ಕಿಂತಲೂ ಕಡೆ ಎಂಬುದನ್ನು ವಿಮಾನ ನಿಲ್ದಾಣಕ್ಕೆ ಯಾಕೆ ಅನ್ವಯಿಸ ಹೊರಟಳೋ!



ತೈವಾನ್‌ನಲ್ಲಿರುವ ಚೀನಿಯರ ಸಿದ್ಧ ದೇವಾಲಯಗಳ ಕಾರ್ಖಾನೆಯಿದು. ಚೀನಾದ ಸಾಂಪ್ರದಾಯಕ ದೇವಾಲಯಗಳೆಲ್ಲ ಒಂದೇ ವಿನ್ಯಾಸದಲ್ಲಿರಬೇಕು ಎಂಬ ಆದೇಶವಿದೆಯಂತೆ. ದೇವಸ್ಥಾನಗಳ ವಾಸ್ತುವಿನ್ಯಾಸದ ಅಧ್ಯಯನ ಮಾಡಿ ಪಿಎಚ್.ಡಿ. ಲಗತ್ತಿಸಿಕೊಳ್ಳುವವರಿಗೆ ಅಲ್ಲಿ ಅವಕಾಶ ಇಲ್ಲ ಅಂತಾಯ್ತು.

ಮೊಬೈಲ್‌ನ ಪೋಕೆಮನ್ ಗೋ ಗೇಮ್‌ನಲ್ಲಿ ರಾಕ್ಷಸನನ್ನು ಹುಡುಕಲು ನೀವು ನಡೆಯಲೇಬೇಕು. ಆದರೆ ಸೋಮಾರಿಗಳಿಗೆಂದು ಈ ನಡಿಗೆಯವರನ್ನು ಬಾಡಿಗೆಗೆ ನೀಡಲು ಸ್ಯಾನ್‌ಫ್ರಾನ್ಸಿಸ್ಕೋದಲ್ಲಿ ಸಂಸ್ಥೆಯೊಂದು ಶುರುವಾಗಿದೆಯಂತೆ. ಮೊಬೈಲ್ ಮೇಲೆ ಬೆರಳಾಡಿಸುವ ಕೆಲಸಕ್ಕೂ ಬಾಡಿಗೆಯವರು ಸಿಗುವ ಕಾಲ ಬರಬಹುದೇನೋ!



ಜಾರ್ಜಿಯಾದ ಯುವತಿಯರು ಒಳ್ಳೆಯ ವರ ಸಿಗಲೆಂದು ದೇವರಲ್ಲಿ ವರ ಬೇಡಿ ಈ ರೀತಿ ಹೂವಿನ ಕಿರೀಟವನ್ನು ಕೊಳಕ್ಕೆ ಎಸೆಯುವ ಪದ್ಧತಿ ಬಹಳ ಹಿಂದಿನಿಂದಲೂ ಇದೆಯಂತೆ. ಬೇಡವಾದ ಗಂಡನನ್ನು ಎಲ್ಲಿ ವಿಲೇವಾರಿ ಮಾಡುತ್ತಾರೋ!

ಇಂಗ್ಲೆಂಡ್ ಪ್ರಧಾನಿ ತೆರೆಸಾ ಮೇ ಪ್ರಧಾನಿ ಹುದ್ದೆಯನ್ನು ಸುಗಮವಾಗಿ ಏರಿರಬಹುದು. ಆದರೆ ಅವರಿರುವ ನಂ.10 ಡೌನಿಂಗ್ ಸ್ಟ್ರೀಟ್‌ನಲ್ಲಿ ಮಾತ್ರ ನಿತ್ಯ ಯುದ್ಧ ನಡೆಯುತ್ತಿದೆಯಂತೆ, ಎರಡು ಬೆಕ್ಕುಗಳ ನಡುವೆ. ನಂ.10ರ ಅಧಿಕೃತ ಬೆಕ್ಕು ಲ್ಯಾರಿ ಹಾಗೂ ವಿದೇಶಾಂಗ ಕಚೇರಿಯ ಪಾಮರ್‌ಸ್ಟಾನ್ ಎದುರಾದಾಗಲೆಲ್ಲ ಕದನ ನಡೆಸುತ್ತಿವೆಯಂತೆ. ಎರಡೂ ಪ್ರಧಾನ ಬೆಕ್ಕುಗಳೇ ಆಗಿರುವುದರಿಂದ ಅವಕ್ಕೂ ಬ್ರೆಕ್ಸಿಟ್‌ನಂತೆ 'ಬೆಕ್ಕಿಟ್ಸ್' ಬೇಕಾಗಬಹುದು.

